ನೋಂದಣಿ ಸಂಖ್ಯೆ : ಡಿ.ವೈ.ಆರ್.270
ದಿನಾಂಕ : 16–09–1963

ಬ್ಯಾಂಕಿಂಗ್ ವ್ಯವಹಾರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD KA 912 P, Dt. 11-11-1987
ಆಡಳಿತ ಕಚೇರಿ ಸ್ಥಳಾಂತರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD BG BL AO 394, Dt. 22-06-2000

**TGMC BANK**

ನಿಮ್ಮ ನಂಬಿಕೆಯೇ ನಮ್ಮ ಆಸ್ತಿ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.
ದೂರವಾಣಿ : 0816–4021102/03
e-mail : tgmc.ho@tgmcbank.com
website : www.tgmcbank.com

# 2024–25ನೇ ಸಾಲಿನ 62ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

**ಸೆಪ್ಟೆಂಬರ್ 13, 2025ನೇ ಶನಿವಾರ**

Book-Post

ಶ್ರೀಮತಿ/ಶ್ರೀ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

## ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು

1. ದೇವತಾ ಪ್ರಾರ್ಥನೆ.
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ.
3. ಸ್ವಾಗತ.
4. 62ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲಿಸುವುದು.
5. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
6. 2024–25ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗಳಿಗೆ ಅನುಮೋದನೆ ಪಡೆಯುವುದು.
7. 2024–25ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನಾ ವರದಿ ಮತ್ತು ಆಡಳಿತ ಮಂಡಳಿಯವರ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.
8. 2024–25ನೇ ಸಾಲಿನ ಖರ್ಚು ವೆಚ್ಚಗಳನ್ನು ಅನುಮೋದಿಸುವುದು ಹಾಗೂ 2025–26ನೇ ಸಾಲಿನ ಮುಂಗಡ ಪತ್ರ ಮಂಜೂರು ಮಾಡುವುದು.
9. ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವುದು.
10. ಉಪವಿಧಿಗಳ ತಿದ್ದುಪಡಿ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.
12. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು.
13. ಅಧ್ಯಕ್ಷರ ಭಾಷಣ.
14. ವಂದನಾರ್ಪಣೆ.

**ಸದಸ್ಯರು ಮತ್ತು ವಿಶೇಷ ಆಹ್ವಾನಿತರಿಗೆ ಮಾತ್ರ**

**ಉಪಹಾರ**

ಸಮಯ ಬೆಳಿಗ್ಗೆ 8–00 ರಿಂದ 9–45 ಗಂಟೆಯವರೆಗೆ

**ಸ್ಥಳ**

**ಆರ್.ಟಿ.ಪಿ. ಕನ್ವೆನ್ಷನ್ ಹಾಲ್**

ಶೆಟ್ಟಿಹಳ್ಳಿ ರಿಂಗ್ ರಸ್ತೆ, ತುಮಕೂರು

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

# 62ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

ದಿನಾಂಕ 13–09–2025ನೇ ಶನಿವಾರ ಬೆಳಿಗ್ಗೆ 10:00 ಗಂಟೆಗೆ ಸರಿಯಾಗಿ ಬ್ಯಾಂಕಿನ
62ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರಿನ ಶೆಟ್ಟಿಹಳ್ಳಿ
ರಿಂಗ್ ರಸ್ತೆಯಲ್ಲಿರುವ

**ಆರ್.ಟಿ.ಪಿ. ಕನ್ವೆನ್ಷನ್ ಹಾಲ್‌ನಲ್ಲಿ**

ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಹೆಚ್. ಎಂ. ದಿವ್ಯಾನಂದಮೂರ್ತಿ**

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ

**ಜೆ. ಸುರೇಶ್**

ಮುಖ್ಯ ಕಾರ್ಯನಿರ್ವಾಹಕರು

ದಿನಾಂಕ : 02–07–2025
ಸ್ಥಳ : ತುಮಕೂರು

## ಉಪವಿಧಿಗಳ ತಿದ್ದುಪಡಿ

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 1. | 18 | ಸದಸ್ಯತ್ವ ಅಂತ್ಯವಾಗುವಿಕೆ<br>ಹೊಸ ಸೇರ್ಪಡೆ | ಸದಸ್ಯತ್ವ ಅಂತ್ಯವಾಗುವಿಕೆ<br>(ಐ) ಬ್ಯಾಂಕಿನ ಹಿತಾಸಕ್ತಿಗೆ, ಘನತೆಗೆ ಹಾಗೂ ಗೌರವಕ್ಕೆ ಧಕ್ಕೆ ತರುವಂತಹ ಮತ್ತು ನಷ್ಟ ಉಂಟುಮಾಡುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗುವ ಯಾವುದೇ ಸದಸ್ಯನ ಸದಸ್ಯತ್ವವನ್ನು, ಸದಸ್ಯನಿಂದ ಸೂಕ್ತ ಕಾರಣ ಕೇಳಿ ನೋಟೀಸ್ ನೀಡಿ, ಸದಸ್ಯನು ಸಮಂಜಸವಾದ ಕಾರಣ ನೀಡದಿದ್ದಲ್ಲಿ ಸದಸ್ಯತ್ವವನ್ನು ಅಂತ್ಯಗೊಳಿಸುವ ತೀರ್ಮಾನವನ್ನು ಆಡಳಿತ ಮಂಡಳಿಯು ನಿರ್ಧರಿಸತಕ್ಕದ್ದು. | ಬ್ಯಾಂಕಿನ ಹಿತದೃಷ್ಟಿಗಾಗಿ |
| 2. | 22.5 | ಕಿಡ್ನಿ, ಹೃದಯ, ಕ್ಯಾನ್ಸರ್, Liver transplantation, Knee Joint replacement ಇವುಗಳ Major ಶಸ್ತ್ರ ಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/–ಗಳಿಂದ ರೂ.50,000/–ಗಳಿಗೆ ಮೀರದಂತೆ, ಕನಿಷ್ಠ 50 ಷೇರುಗಳನ್ನು ಹೊಂದಿರುವ ಹಾಗೂ ಶಸ್ತ್ರ ಚಿಕಿತ್ಸೆಯಾಗಿ ಆರು ತಿಂಗಳ ಒಳಗೆ ದಾಖಲೆಗಳನ್ನು ಸಲ್ಲಿಸುವ ಸದಸ್ಯರಿಗೆ, ಸದಸ್ಯರ ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಅಥವಾ ಬ್ಯಾಂಕಿನ ಲಾಭ–ನಷ್ಟದ ಖಾತೆಗೆ ಖರ್ಚು ಹಾಕಿ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ಧೃಡೀಕರಣ ಪತ್ರವನ್ನು ಪರಿಗಣಿಸಿ ಸಹಾಯಧನ ನೀಡಬಹುದು. | ಕಿಡ್ನಿ, ಹೃದಯ, ಕ್ಯಾನ್ಸರ್, Liver transplantation, Knee Joint replacement ಇವುಗಳ Major ಶಸ್ತ್ರ ಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/–ಗಳಿಂದ ರೂ.50,000/–ಗಳಿಗೆ ಮೀರದಂತೆ, ಕನಿಷ್ಠ 50 ಷೇರುಗಳನ್ನು ಹೊಂದಿರುವ, ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ನಿಯಮಿತವಾಗಿ ವ್ಯವಹಾರಗಳನ್ನು ಮಾಡಿರುವ ಹಾಗೂ ಶಸ್ತ್ರ ಚಿಕಿತ್ಸೆಯಾಗಿ ಆರು ತಿಂಗಳ ಒಳಗೆ ದಾಖಲೆಗಳನ್ನು ಸಲ್ಲಿಸುವ ಸದಸ್ಯರು ತಮ್ಮ ಸದಸ್ಯತ್ವದ ಅವಧಿಯಲ್ಲಿ ಒಂದು ಬಾರಿ ಮಾತ್ರ **ಸಹಾಯಧನ** ಪಡೆಯಲು ಅವಕಾಶವಿದ್ದು, ಸದಸ್ಯರ ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಅಥವಾ ಬ್ಯಾಂಕಿನ ಲಾಭ–ನಷ್ಟದ ಖಾತೆಗೆ ಖರ್ಚು ಹಾಕಿ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ಧೃಡೀಕರಣ ಪತ್ರವನ್ನು ಪರಿಗಣಿಸಿ ಸಹಾಯಧನ ನೀಡಬಹುದು. | ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 3. | 78 | **ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ :** ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಈ ಕೆಳಗೆ ಕಂಡಂತೆ ಷೇರುಗಳನ್ನು ಅಗತ್ಯವಾಗಿ ಪಡೆದಿರಲೇಬೇಕು. | **ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ :** ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಈ ಕೆಳಗೆ ಕಂಡಂತೆ ಷೇರುಗಳನ್ನು ಅಗತ್ಯವಾಗಿ ಪಡೆದಿರಲೇಬೇಕು. | ಬ್ಯಾಂಕಿನ ಆಡಳಿತಾತ್ಮಕ ಕಾರಣಕ್ಕಾಗಿ |
| | 78.1 | ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಜಾಮೀನಿನ ಮೇಲೆ ಪಡೆದ ಸಾಲ, ಬಿಲ್ಲುಗಳ ಮತ್ತು ಚೆಕ್ಕುಗಳ ಖರೀದಿ ಅಥವಾ ವಟಾವಣೆ ಮಾಡಿ ಸಾಲವನ್ನು ಪಡೆಯುವವರು ಸಾಲದ ಮೊಬಲಗಿನ ಶೇಕಡ 5 ರಷ್ಟು ಷೇರುಗಳನ್ನು ಪಡೆದಿರಬೇಕು. | ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಜಾಮೀನಿನ ಮೇಲೆ ಪಡೆದ ಸಾಲ, ಬಿಲ್ಲುಗಳ ಮತ್ತು ಚೆಕ್ಕುಗಳ ಖರೀದಿ ಅಥವಾ ವಟಾವಣೆ ಮಾಡಿ ಸಾಲವನ್ನು ಪಡೆಯುವವರು ಸಾಲದ ಮೊಬಲಗಿನ ಶೇಕಡ 5 ರಷ್ಟು ಷೇರುಗಳನ್ನು ಪಡೆದಿರಬೇಕು. | |
| | 78.2 | ವಾಸ್ತವಿಕ ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡ ಎರಡೂವರೆಯಷ್ಟು ಷೇರುಗಳನ್ನು ಪಡೆದಿರಬೇಕು. **(ಟಿಪ್ಪಣಿ : ಸಾಲಗಳ ಮೇಲೆ ಷೇರು ಜೋಡಣೆ ಹೊಂದಬೇಕೆಂಬ ಈ ನಿರ್ಬಂಧವು ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ)** | ವಾಸ್ತವಿಕ ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡ 2.5 ರಷ್ಟು ಷೇರುಗಳನ್ನು ಪಡೆದಿರಬೇಕು. **(ಟಿಪ್ಪಣಿ : ಸಾಲಗಳ ಮೇಲೆ ಷೇರು ಜೋಡಣೆ ಹೊಂದಬೇಕೆಂಬ ಈ ನಿರ್ಬಂಧವು ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ ಹಾಗೂ ಷೇರು ಜೋಡಣೆಯ ಪ್ರಮಾಣವನ್ನು ಭಾರತೀಯ ರಿಜರ್ವ್ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಯಂತೆ ನಿಗಧಿಪಡಿಸುವುದು)** | |

## : ಸೂಚನೆಗಳು :

1. ವಾರಸುದಾರರ ಬದಲಾವಣೆ ಇದ್ದಲ್ಲಿ ಕೂಡಲೇ ನೋಂದಾಯಿಸಲು ಕೋರಲಾಗಿದೆ.
2. ಬ್ಯಾಂಕಿನ ಸದಸ್ಯರುಗಳಲ್ಲಿ ಕೆಲವರು ದೈವಾಧೀನರಾಗಿದ್ದು, ಅವರಿಗೆ ಸಂಬಂಧಪಟ್ಟವರು ಸೂಕ್ತ ದಾಖಲೆಗಳನ್ನು ಒದಗಿಸಿ ಮೃತರ ಹೆಸರಿನಲ್ಲಿರುವ ಷೇರು ಮೊಬಲಗನ್ನು ಶೀಘ್ರವೇ ಪಡೆಯಲು ಕೋರಿದೆ. ಮರಣೋತ್ತರ ಸಹಾಯ ನಿಧಿಯನ್ನು ಸದಸ್ಯರು ದೈವಾಧೀನರಾದ ದಿನಾಂಕದಿಂದ 2 ವರ್ಷಗಳೊಳಗಾಗಿ ಪಡೆಯತಕ್ಕದ್ದು.
3. ಷೇರು ಪ್ರಮಾಣ ಪತ್ರಗಳನ್ನು ಇದುವರೆಗೆ ಪಡೆಯದೆ ಇರುವ ಸದಸ್ಯರು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯಲು ಕೋರಿದೆ.
4. ಆಡಳಿತ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ದಿನಾಂಕ 29-08-2025 ರಿಂದ ನೀಡಲಾಗುವುದು. ಪರ್ಯಾಯ ವ್ಯವಸ್ಥೆಯಾಗಿ ಇ-ಮೇಲ್ ವಿಳಾಸ ನೀಡಿದ ಸದಸ್ಯರಿಗೆ soft copy ಮುಖಾಂತರ ಕಳುಹಿಸಲಾಗುವುದು ಹಾಗೂ ವೆಬ್‌ಸೈಟ್‌ನಲ್ಲಿ ಆಡಳಿತ ವರದಿಯನ್ನು ಪ್ರಕಟಿಸಲಾಗುವುದು.
5. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಸದಸ್ಯರು ದಿನಾಂಕ 08-09-2025 ರೊಳಗೆ ಮುಖ್ಯ ಕಾರ್ಯನಿರ್ವಾಹಕರಿಗೆ ಲಿಖಿತ ಮೂಲಕ ಸಲ್ಲಿಸಲು ಕೋರಿದೆ.
6. ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಗುರುತಿನ ಚೀಟಿ ಕಡ್ಡಾಯವಾಗಿದ್ದು, ಸದಸ್ಯತ್ವದ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು ತಮ್ಮ ಭಾವಚಿತ್ರವನ್ನು ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಕೋರಿದೆ.
7. ಬ್ಯಾಂಕಿನ ಸದಸ್ಯರು ಬ್ಯಾಂಕು ನೀಡುತ್ತಿರುವ ವೈದ್ಯಕೀಯ ತಪಾಸಣೆ ಹಾಗೂ ಶುಶ್ರೂಷೆಗಾಗಿ ಮತ್ತು ಶಸ್ತ್ರ ಚಿಕಿತ್ಸೆಗೆ ನೀಡುವ ಸೌಲಭ್ಯ ಪಡೆಯಲು ಕನಿಷ್ಠ 50 ಷೇರುಗಳನ್ನು ಹೊಂದಿರಬೇಕಾಗಿದ್ದು, 50 ಷೇರುಗಳಿಗಿಂತ ಕಡಿಮೆ ಷೇರುಗಳನ್ನು ಹೊಂದಿರುವ ಸದಸ್ಯರು ಹೆಚ್ಚುವರಿ ಷೇರುಗಳನ್ನು ಪಡೆಯತಕ್ಕದ್ದು.

**ಸಿ.ಆರ್. ನಟರಾಜ್**
**ಉಪಾಧ್ಯಕ್ಷರು**

**ಹೆಚ್.ಎಂ. ದಿವ್ಯಾನಂದಮೂರ್ತಿ**
**ಅಧ್ಯಕ್ಷರು**